OFFICE OF THE DISTRICT FIRE OFFICER
Karnataka Fire & Emergency Services,
Anjanapura Fire Station,
BANGALORE-560 108

# OFFICE OF THE DISTRICT FIRE OFFICER, KARNATAKA FIRE & EMERGENCY SERVICES, ANJANAPURA FIRE STATION, BENGALURU-560 108.

**C.No: 20/DFO/AFS/BLR/FSCR-61/2024.** **Dated: 25-07-2024**

**"Annexure-2"**

**To,**

**The Authorized Signatory,**
**Carmel English School,**
**No. 02, Padmanabhanagara,**
**Banashankari 2nd Stage,**
**Bengaluru-60070.**

*Sir,*

Sub : Issue of **"Renewal Fire Safety Compliance report"** with respect to fire prevention, fighting and evacuation measures maintained at **"Carmel English School, No. 02, Padmanabhanagara, Banashankari 2nd Stage, Bengaluru -560070"** **-reg.**

Ref : 1) FSR C.No: 39/DFO/BFS/2022; Date: 01-10-2022
2) FSCR C.No: 45/DFO/BFS/2022; Date: 20-10-2022.
3) Your request letter dated: 20-07-2024;

<<<@@@@@>>>

With reference to the above cited subject, as per reference (1) a conditional Fire Safety Recommendation was issued to the premises of at **"Carmel English School, No. 02, Padmanabhanagara, Banashankari 2nd Stage, Bengaluru -560070"** with a condition to fulfill all the recommendations stipulated in fire safety recommendation and compliance the same within 3 months and as per reference (2) the Fire Safety Compliance Report was issued for the same.

With reference cited (3) above, the management of **"Carmel English School'** had requested for the renewal fire safety compliance report from our department. In this regard the above school building was inspected by me on 24-07-2024 to check the compliance of all the recommendations stipulated in fire safety recommendation & on inspection it was found that all the recommendations stipulated in fire safety recommendation has been complied.

Under the above circumstance the Karnataka Fire & Emergency Services Department is issuing the **"Renewal Fire Safety Compliance Report"** to **"Carmel English School, No. 02, Padmanabhanagara, Banashankari 2nd Stage, Bengaluru -560070"** subject to proper maintenance of firefighting installations in the good working conditions and arrange for 40% of staffs/ employees training within 03 months from the date of issue of this report.

"***This report is valid for only two year from the date of issue and is renewable without fail'.***

ANJANAPURA FIRE STATION * BENGALURU *
25/07/24

*Yours faithfully*
25/07/24

DISTRICT FIRE OFFICER
Anjanapura Fire Station,
BANGALORE-560 108

ಪೊಲೀಸ್ ಮಹಾ ನಿರ್ದೇಶಕರ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ.1 ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 080 25570733
22971501
22971507

ಸಂಖ್ಯೆ:ಜಿಬಿಸಿ(2)1236/2025 ದಿನಾಂಕ:31-07-2025
E-Office Com No.65006.

ಗೆ,

ಮೆ|| ಕಾರ್ಮೇಲ್ ಇಂಗ್ಲೀಷ್ ಸ್ಕೂಲ್,
ನಂ.02, ಪದ್ಮನಾಭನಗರ,
ಬನಶಂಕರಿ 2ನೇ ಸ್ಟೇಜ್,
ಬೆಂಗಳೂರು-560070.

ಮಾನ್ಯರೆ,

ವಿಷಯ: ಬೆಂಗಳೂರು ನಗರ, ಬನಶಂಕರಿ 2ನೇ ಸ್ಟೇಜ್, ಪದ್ಮನಾಭನಗರ ನಂ.02 ಇಲ್ಲಿ ನಿರ್ಮಿಸಿರುವ ಮೆ|| ಕಾರ್ಮೇಲ್ ಇಂಗ್ಲೀಷ್ ಸ್ಕೂಲ್ ಕಟ್ಟಡಕ್ಕೆ ಸಮಾಪನ ಪತ್ರ ನೀಡುವ ಬಗ್ಗೆ

ಉಲ್ಲೇಖ:1)ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಗ್ನಿ ಸಲಹಾ ಪತ್ರ ಸಂ.ಜಿಬಿಸಿ(2)1236/2025 ದಿನಾಂಕ:01-07-2025.
2)ನಿಮ್ಮ ಪತ್ರ ದಿನಾಂಕ:02-07-2025.

<<<<<<<>>>>>>>

ಬೆಂಗಳೂರು ನಗರ, ಬನಶಂಕರಿ 2ನೇ ಸ್ಟೇಜ್, ಪದ್ಮನಾಭನಗರ, ನಂ.02 ಇಲ್ಲಿ ನಿರ್ಮಿಸಿರುವ 20.10 ಮೀಟರ್ ಎತ್ತರದ 02 ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ ಮೆ|| ಕಾರ್ಮೇಲ್ ಇಂಗ್ಲೀಷ್ ಸ್ಕೂಲ್ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ:01-07-2025 ರಂದು ನಿಮ್ಮ ಕೋರಿಕೆಯಂತೆ ಅಗ್ನಿ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2) ರ ನಿಮ್ಮ ಪತ್ರದಲ್ಲಿ, ಸದರಿ ಶೈಕ್ಷಣಿಕ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ ನೀಡುವಂತೆ ಕೋರಿರುವಿರಿ.

ನಿಮ್ಮ ಕೋರಿಕೆಯಂತೆ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ದಕ್ಷಿಣ ವಲಯ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ರವರು ದಿನಾಂಕ: 24-07-2025 ರಂದು ಬೆಂಗಳೂರು ನಗರ, ಬನಶಂಕರಿ 2ನೇ ಸ್ಟೇಜ್, ಪದ್ಮನಾಭನಗರ ನಂ.02 ಇಲ್ಲಿ ನಿರ್ಮಿಸಿರುವ ಕಟ್ಟಡವನ್ನು ಪರಿವೀಕ್ಷಣೆ ಮಾಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶೈಕ್ಷಣಿಕ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸಮಾಪನ ಪತ್ರ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ, ಬೆಂಗಳೂರು ನಗರ, ಬನಶಂಕರಿ 2ನೇ ಸ್ಟೇಜ್, ಪದ್ಮನಾಭನಗರ ನಂ.02 ಇಲ್ಲಿ ನಿರ್ಮಿಸಿರುವ 20.10 ಮೀಟರ್ ಎತ್ತರದ 2 ನೆಲಹಂತ ಮತ್ತು 04 ಮೇಲಂತಸ್ತುಗಳನ್ನು ಹೊಂದಿರುವ ಮೆ|| ಕಾರ್ಮೇಲ್ ಇಂಗ್ಲೀಷ್, ಸ್ಕೂಲ್ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂಖ್ಯೆ:ಜಿಬಿಸಿ(2)1236/2025 ದಿನಾಂಕ:01-07-2025 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ನಿಮ್ಮ ದಿನಾಂಕ:28-07-2025 ಮುಚ್ಚಳಿಕೆ ಪತ್ರದಲ್ಲಿ ಒಪ್ಪಿರುವಂತೆ, ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಹಾಗೂ ಕಟ್ಟಡದಲ್ಲಿನ ಶೇಕಡಾ 40% ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು

Scanned with CamScanner

ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡಮಿಯಲ್ಲಿ ಸೂಕ್ತ ತರಬೇತಿಯನು 03 ತಿಂಗಳೊಳಗೆ ಪಡೆಯಲು ವ್ಯವಸ್ಥೆಪಡಿಸಬೇಕೆಂಬ ಷರತ್ತಿನ ಮೇಲೆ ಸಮಾಪನ ವರದಿ ಪ್ರಮಾಣ ಪತ್ರವನ್ನು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನೀಡಲಾಗಿದೆ.

ಈ ಸಮಾಪನ ಪ್ರಮಾಣ ಪತ್ರವು ಜಾರಿಯಾದ ದಿನಾಂಕದಿಂದ ಮುಂದಿನ ಎರಡು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪ್ರಮಾಣ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ, ಅಥವಾ ಯಾವುದೇ ರೀತಿಯ ಖಾಯಂ/ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, ಈ 'ಸಮಾಪನ ಪ್ರಮಾಣ ಪತ್ರವು ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಡಿಜಿಪಿ & ಡಿಜಿ ರವರಿಂದ

ಕರಡು ಅನುಮೋದಿಸಲ್ಪಟ್ಟಿದೆ

Digitally signed by
T N SHIVASHANKARA
Date: 31-07-2025
14:58:33

(ಟಿ.ಎನ್.ಶಿವಶಂಕರ)
ನಿರ್ದೇಶಕರು
ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
ರವರ ಪರವಾಗಿ

ಪ್ರತಿ:- ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ದಕ್ಷಿಣ ವಲಯ.

Scanned with CamScanner